
ಕೊಡಚಾದ್ರಿ ಬೆಟ್ಟ

# ಕೊಡಚಾದ್ರಿಯ ನೆತ್ತಿಯಲ್ಲಿ ಪ್ರವಾಸಿಗರ ಸಂಭ್ರಮ

ಜುಲೈ ತಿಂಗಳು ಕೊಡಚಾದ್ರಿಗೆ ಅತ್ಯಧಿಕ ಪ್ರವಾಸಿಗರು ಬರುವ ಸಮಯ. ಆದರೆ ಈ ವರ್ಷದ ಜುಲೈ ನಿರ್ಜನವಾಗಿಯೇ ಕಳೆದುಹೋಯ್ತು. ಆಗಸ್ಟ್‌ನಲ್ಲಿ ಲಾಕ್‌ಡೌನ್ ತೆರವುಗೊಂಡ ನಂತರ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಯ್ತು. ಪ್ರವಾಸಿಗರೇನೋ ಬರಲು ಮನಸ್ಸು ಮಾಡಿದರು. ಆದರೆ ಸ್ಥಳೀಯರಿಗೆ ಕೊರೊನಾ ಬಗೆಗಿನ ಭೀತಿ ಕಡಿಮೆಯಾಗಿರಲಿಲ್ಲ. ಅವರ ಪ್ರತಿರೋಧದ ಕಾರಣಕ್ಕೆ ಸ್ಥಳೀಯ ಆಡಳಿತ ಆ. 15ರ ವರೆಗೆ ಕೊಡಚಾದ್ರಿ ಸುತ್ತಲಿನ ಹೋಮ್‌ಸ್ಟೇಗಳನ್ನು ತೆರೆಯದಿರುವಂತೆ ಸೂಚಿಸಿತ್ತು. ಆಗಸ್ಟ್ 15ರಿಂದ ಮತ್ತೆ ಬಹುತೇಕ ಹೋಮ್‌ಸ್ಟೇಗಳು ಬಾಗಿಲು ತೆರೆದು ಪ್ರವಾಸಿಗರನ್ನು ಬರಮಾಡಿಕೊಳ್ಳುತ್ತಿವೆ. ಪ್ರವಾಸಿಗರೂ ಮುಗಿಬಿದ್ದು ಕೊಡಚಾದ್ರಿಯ ನೆತ್ತಿಮೇಲಿನ ಸೂರ್ಯಾಸ್ತದ ರಸಸಮಯವನ್ನು ಆಸ್ವಾದಿಸುತ್ತಿದ್ದಾರೆ. ಕಡಿದಾದ ರಸ್ತೆಗಳಲ್ಲಿ ಓಲಾಡುತ್ತ ಜೀಪುಗಳು ಓಡಾಡಲು ಶುರುವಾಗಿವೆ. ಚಾರಣ ಹೋಗುವವರ ಸಂಖ್ಯೆಯೂ ಹೆಚ್ಚಿದೆ.

‘ಕೊಡಚಾದ್ರಿ ಬುಡದ ಕಟ್ಟಿನಹೊಳೆ ಸರ್ಕಲ್ ಸಮೀಪದ ಬಹುತೇಕ ಹೋಮ್‌ಸ್ಟೇಗಳನ್ನು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ತೆರೆಯಲಾಗಿದೆ. ಇನ್ನೂ ಕೆಲವು ಹೋಮ್‌ಸ್ಟೇಗಳು ಕಾದು ನೋಡುವ ನಿರ್ಧಾರದಲ್ಲಿ ಬಾಗಿಲು ಮುಚ್ಚಿಕೊಂಡೇ ಇದ್ದಾರೆ. ಅಕ್ಟೋಬರ್‌ನಿಂದ ಹೋಮ್‌ಸ್ಟೇ ಆರಂಭಿಸುವ ಯೋಚನೆಯಲ್ಲಿದ್ದೇನೆ’ ಎನ್ನುತ್ತಾರೆ ‘ಸಿಂಹ ಫಾರ್ಮ್ ಹೌಸ್’ನ ಆದಿತ್ಯ ಸಿಂಹ

ವಾರಾಂತ್ಯದಲ್ಲಿ ಸಾವಿರಕ್ಕೂ ಅಧಿಕ ಜನರು ಕೊಡಚಾದ್ರಿಗೆ ಭೇಟಿ ನೀಡುತ್ತಿದ್ದಾರೆ. ಈ ಜನರ ಹರಿವು ಮತ್ತು ಕೊರೊನಾ ರಿಸ್ಕ್ ಕಾರಣಕ್ಕಾಗಿ ಹೋಮ್ ಸ್ಟೇಗಳ ಬೆಲೆಯೂ ತುಸು ದುಬಾರಿಯಾಗಿದೆ.



> ಹೋಂ ಸ್ಟೇಗಳಲ್ಲಿ ವಾಸ್ತವ್ಯ ಶುರುವಾಗಿದೆ. ಸುರಕ್ಷತಾ ಕ್ರಮಗಳಿಗೆ ಒತ್ತು ನೀಡಿದ್ದೇವೆ.‘ವರ್ಕ್ ಫ್ರಂ ಹೋಂ’ (ಮನೆಯಿಂದಲೇ ಕೆಲಸ) ಅವಕಾಶ ಇರುವವರು ಜಾಸ್ತಿ ಬರುತ್ತಿದ್ದಾರೆ. ಉದ್ಯಮ ತುಸು ಸುಧಾರಣೆ ಹಾದಿಯಲ್ಲಿ ಹೆಜ್ಜೆ ಇಟ್ಟಿದೆ.

**-ಹೊಲದ ಗದ್ದೆ ಗಿರೀಶ್,**
ಸಾರಂಗ ಹೋಂ ಸ್ಟೆ, ಮಲ್ಲಂದೂರು.

ಹಂಪಿ ನೋಡಲು ಹೆಚ್ಚಿನವರು ಇಷ್ಟಪಡುತ್ತಾರೆ. ಹವ್ಯಾಸಿ ಛಾಯಾಗ್ರಾಹಕರೂ ಇದೇ ಸಂದರ್ಭಕ್ಕೆ ಕಾದು ಕುಳಿತಿರುತ್ತಾರೆ.

ಮಾರ್ಚ್‌ನಿಂದ ಆಗಸ್ಟ್ ಎರಡನೇ ವಾರದವರೆಗೆ ‘ಬಯಲು ವಸ್ತು ಸಂಗ್ರಹಾಲಯ’ದಲ್ಲಿ ಬರೀ ಮೌನ ಆವರಿಸಿಕೊಂಡಿತ್ತು. ಈಗ ಕೊರೊನಾ ಭಯ ಜನರಿಂದ ನಿಧಾನ ದೂರವಾದಂತೆ ಗೋಚರಿಸುತ್ತಿದೆ. ಅದಕ್ಕೆ ಸಾಕ್ಷಿ ಪ್ರವಾಸಿಗರ ಸಂಖ್ಯೆಯಲ್ಲಿ ದಿನೇ ದಿನೇ ಹೆಚ್ಚಳ ಆಗುತ್ತಿರುವುದು.

ಮಳೆಗಾಲದಲ್ಲಿ ಪ್ರತಿ ವರ್ಷ ನಿತ್ಯ ಕನಿಷ್ಠ ಏನಿಲ್ಲವೆಂದರೂ ಸರಿಸುಮಾರು ಎರಡು ಸಾವಿರಕ್ಕಿಂತ ಅಧಿಕ ಪ್ರವಾಸಿಗರು ಬಂದು ಹೋಗುತ್ತಾರೆ. ಸದ್ಯ ಈ ಸಂಖ್ಯೆ ಸಾವಿರದ ಗಡಿ ದಾಟಿದೆ. ವಾರಾಂತ್ಯದಲ್ಲಿ ಎರಡರಿಂದ ಮೂರು ಸಾವಿರಕ್ಕೂ ಅಧಿಕ ಜನ ಬರುತ್ತಿದ್ದಾರೆ. ಇದುವರೆಗೆ ಬಾಗಿಲು ಮುಚ್ಚಿದ್ದ ಹೋಟೆಲ್, ಹೋಂ ಸ್ಟೇ, ರೆಸಾರ್ಟ್‌ಗಳಿಗೆ ಪುನಃ ಬೇಡಿಕೆ ಸೃಷ್ಟಿಯಾಗಿದೆ. ಕೆಲಸ ಇಲ್ಲದೆ ಕಂಗಾಲಾಗಿದ್ದ ಗೈಡ್‌ಗಳಿಗೆ ಕೆಲಸ ಸಿಗುತ್ತಿದೆ.

‘ಅಂತರರಾಜ್ಯ ಸಂಚಾರದ ಮೇಲಿನ ನಿರ್ಬಂಧವನ್ನು ಕೇಂದ್ರ ಸರ್ಕಾರ ಈಗಷ್ಟೇ ತೆರವುಗೊಳಿಸಿದೆ. ಆದರೂ ನಿರೀಕ್ಷೆಗೂ ಮೀರಿ ಪ್ರವಾಸಿಗರು ಬರುತ್ತಿದ್ದಾರೆ. ದಿನ ಕಳೆದಂತೆ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ವಿದೇಶಗಳಿಗೆ ವಿಮಾನ ಸೇವೆ ಆರಂಭಿಸುವ ಮಾತುಗಳು ಕೇಳಿ ಬರುತ್ತಿವೆ. ಒಂದುವೇಳೆ ಅದು ಆರಂಭವಾದರೆ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಯರು ಬರುತ್ತಾರೆ’ ಎಂದು ಹಂಪಿ ಗೈಡ್ ಗೋಪಾಲ್ ನಂಬಿಕೆಯ ಮಾತುಗಳನ್ನಾಡುತ್ತಾರೆ. ಜನ ಕೊರೊನಾ ಭಯಬಿಟ್ಟು ಬರುತ್ತಿದ್ದಾರೆ ಎಂಬುದು ಅವರಂಥ ನೂರಾರು ಗೈಡ್‌ಗಳಲ್ಲಿ ಜೀವನೋತ್ಸಾಹ ತುಂಬಿದೆ.

‘ಜುಲೈನಲ್ಲಿ ಬೆರಳೆಣಿಕೆಯಷ್ಟು ಪ್ರವಾಸಿಗರು ಬಂದು ಹೋಗುತ್ತಿದ್ದರು. ಹಾಕಿದ ಬಂಡವಾಳವೂ ವಾಪಸ್ ಬರುವ ಲಕ್ಷಣ ಇರಲಿಲ್ಲ. ಹೀಗಾಗಿ ಹಂಪಿಯಲ್ಲಿ ಯಾರೊಬ್ಬರೂ ಹೋಟೆಲ್ ತೆರೆಯಲು ಧೈರ್ಯ ತೋರಿರಲಿಲ್ಲ. ಈಗ ಹೆಚ್ಚು ಕಮ್ಮಿ ಲಾಕ್‌ಡೌನ್ ತೆಗೆಯಲಾಗಿದೆ. ಕೊರೊನಾ ಭಯ ಕಡಿಮೆಯಾಗಿದೆ. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ವಾರಾಂತ್ಯಕ್ಕೆ ಆ ಸಂಖ್ಯೆ ಹೆಚ್ಚಾಗುತ್ತಿದೆ. ಈಗ ಬಹುತೇಕರು ಹೋಟೆಲ್‌ಗಳನ್ನು ತೆರೆದಿದ್ದಾರೆ. ನಿಧಾನವಾಗಿ ವ್ಯಾಪಾರ ಚೇತರಿಸಿಕೊಳ್ಳುತ್ತಿದೆ’ ಎನ್ನುವ ಸ್ಥಳೀಯ ಹೋಟೆಲ್ ಮಾಲೀಕ ಕೃಷ್ಣ ಅವರ ಮಾತಿನಲ್ಲಿ ಉತ್ಸಾಹದ ಧ್ವನಿ ಕೇಳಿಸುತ್ತದೆ.

ಪ್ರವಾಸಿಗರು ಬರದ ಕಾರಣ ಶೆಡ್ ಸೇರಿದ್ದ ಬ್ಯಾಟರಿಚಾಲಿತ ವಾಹನಗಳು ಸೆಪ್ಟೆಂಬರ್ 1ರಿಂದ ರಸ್ತೆಗೆ ಇಳಿದಿವೆ. ಅಕ್ಟೋಬರ್‌ನಿಂದ ಇಡೀ ಹಂಪಿಯ ಪರಿಸರದಲ್ಲಿ ಮಿನಿ ರೈಲು ಮಾದರಿಯ ಬ್ಯಾಟರಿ ಅಥವಾ ಡೀಸೆಲ್ ಚಾಲಿತ ವಾಹನಗಳನ್ನು ಓಡಿಸಲು ನಿರ್ಧರಿಸಲಾಗಿದೆ. ಇದು ಸಹ ಇನ್ನಷ್ಟು ಪ್ರವಾಸಿಗರ ಆಕರ್ಷಣೆಗೆ ಕಾರಣವಾಗಬಹುದು.

ಚಿತ್ರಗಳು: ಎ.ಎನ್‌ಮೂರ್ತಿ, ದಿನೇಶ್ ಮಾನೀರ್, ಆದಿತ್ಯ ಬೀಳೂರು, ಪ್ರಜಾವಾಣಿ ಸಂಗ್ರಹ.

ಪ್ರತಿಕ್ರಿಯಿಸಿ: feedback@sudha.co.in

ಪ್ರವಾಸ